# ಸಂಘಟನೆ ಸುಲಭವಲ್ಲ

**ಸ್ವಾಮಿ ಪುರುಷೋತ್ತಮಾನಂದ**

*ಸಂಘವೆಂದರೆ ಸ್ವಲ್ಪ ಸಂಘರ್ಷವಿದ್ದೇ ಇರುತ್ತದೆ. ಆದರೂ ಪರಸ್ಪರ ಪ್ರೀತಿ ಮತ್ತು ತಾಳ್ಮೆ ಸಂಘರ್ಷವನ್ನು ಕನಿಷ್ಠ ಗೊಳಿಸಬಲ್ಲವು. ಸಂಘಟನೆಯ ಮರ್ಮವನ್ನು ಉದಾಹರಣೆ ಗಳ ಮೂಲಕ ತಿಳಿಸಿಕೊಟ್ಟಿರುವ ಪೂಜ್ಯ ಸ್ವಾಮೀಜಿಯವರು ಹಲವು ಕೃತಿಗಳ ಮತ್ತು ಗಾಯನದ ಮೂಲಕ ಪ್ರಸಿದ್ಧರಾಗಿರು ವರು. ಪ್ರಸ್ತುತ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.*

ಸ್ವಾಮಿ ವಿವೇಕಾನಂದರು ಅಮೆರಿಕದ ಶ್ರೀ ಲಿಯಾನ್ ಹಾಗೂ ಶ್ರೀಮತಿ ಲಿಯಾನ್ ಎಂಬ ವಯಸ್ಸಾದ ಸಭ್ಯ ದಂಪತಿಗಳ ಮನೆಯಲ್ಲಿ ವಾಸವಾಗಿದ್ದ ಸಮಯ ಅದು. ಒಂದಾನೊಂದು ದಿನ ಸ್ವಾಮೀಜಿಯವರು ಶ್ರೀಮತಿ ಲಿಯಾನರ ಬಳಿಗೆ ಬಂದು ಹೇಳುತ್ತಾರೆ: "ನಾನು ಇಲ್ಲಿ ಈ ಅಮೆರಿಕದಲ್ಲಿ ಒಂದು ದೊಡ್ಡ ಪ್ರಲೋಭನೆಗೆ ಒಳಗಾದೆ!" ಆಗ ಆ ಅಜ್ಜಿ ಕೀಟಲೆಯ ದನಿಯಲ್ಲಿ ಕೇಳಿದರು: "ನಿಮ್ಮನ್ನು ಪ್ರಲೋಭನೆ ಗೊಳಿಸಿದ ಆ ಭಾಗ್ಯವಂತೆ ಯಾರಿರಬಹುದೊ! " ಆಗ ಸ್ವಾಮೀಜಿ ಗಟ್ಟಿಯಾಗಿ ನಗುತ್ತ ಹೇಳಿದರು: "ಓ, ಅದು ಯುವತಿಯಲ್ಲ, ಅದು ಸಂಘಟನೆ!" ಆ ಬಳಿಕ ತಮಗೆ ಅಮೆರಿಕದ ಸಂಘಟನೆಯ ತಂತ್ರ ಅಷ್ಟೇಕೆ ಮೆಚ್ಚುಗೆಯಾಯಿ ತೆಂಬುದನ್ನು ವಿವರಿಸುತ್ತಾರೆ: "ನೋಡಿ, ನಮ್ಮಲ್ಲಿ ಶ್ರೀರಾಮ ಕೃಷ್ಣರ ಸಂನ್ಯಾಸೀ ಶಿಷ್ಯರೆಲ್ಲ ಚೆಲ್ಲಾಪಿಲ್ಲಿಯಾಗಿದ್ದಾರೆ. ಅವರು ಯಾವುದಾದರೂ ಊರಿಗೆ ಹೋಗುತ್ತಾರೆ; ಅಲ್ಲಿ ಒಂದು ಮರದ ಬುಡದಲ್ಲಿ ಕುಳಿತುಕೊಳ್ಳುತ್ತಾರೆ—ಜನ ತಮ್ಮ ಬಳಿಗೆ ಬಂದು ತಮ್ಮಿಂದ ಏನಾದರೂ ಮಾರ್ಗದರ್ಶನ ಪಡೆಯುವು ದಾದರೆ ಪಡೆಯಲಿ ಎಂದು. ಹೀಗೆ ಆ ಸಂನ್ಯಾಸಿಗಳಿಂದ ಲೋಕಸೇವೆಯೇನೋ ನಡೆಯುತ್ತಿದೆಯಾದರೂ ಅದು ತೀರ ಅಲ್ಪ ಪ್ರಮಾಣದ್ದು! ಇದೇ ಜನಬಲವನ್ನು ಸರಿಯಾಗಿ ಸಂಘ ಟಿಸಲು ಸಾಧ್ಯವಾದರೆ ಎಷ್ಟೊಂದು ಅದ್ಭುತ ಕಾರ್ಯಗಳನ್ನು ಸಾಧಿಸಬಹುದು ಎಂಬುದನ್ನು ನಾನು ಈ ಅಮೆರಿಕದಲ್ಲಿ ಕಂಡುಕೊಂಡೆ!"

ಅಮೆರಿಕದ ಬುದ್ಧಿಜೀವಿಗಳ ಯಶಸ್ಸಿನ ರಹಸ್ಯವಿರುವುದು ಅವರ ಸಂಘಟನಾ ಕೌಶಲದಲ್ಲಿ ಎಂಬ ಗುಟ್ಟು, ಸ್ವಾಮೀಜಿ ಯವರ ಪಾಲಿಗೆ ರಟ್ಟಾಯಿತೇನೋ ನಿಜ. ಆದರೆ ಭಾರತದ ಜನಮನದಲ್ಲಿ ಸಂಘಟನೆಯ ಮಹತ್ವವನ್ನು ಮನ ಮುಟ್ಟಿಸುವುದು ಹೇಗೆ? ಏಕೆಂದರೆ ಸ್ವಾಮೀಜಿಯವರು ಭಾರತ ದಲ್ಲಿ ಕಂಡದ್ದು "ಮೂವರು ಭಾರತೀಯರು ಐದು ನಿಮಿಷ ಕೂಡ ಒಮ್ಮತದಿಂದ ಇರಲಾರರು" ಎಂಬ ಕಟುಸತ್ಯವನ್ನು! ಅವರೆನ್ನುತ್ತಾರೆ: "ಭಾರತೀಯರಾದ ನಮ್ಮಲ್ಲಿ ಒಂದು ದೊಡ್ಡ ದೋಷವಿದೆ. ನಾವು ಸ್ಥಿರವಾದ ಸಂಘವೊಂದನ್ನು ರೂಪಿಸಿ ಕೊಳ್ಳಲಾರೆವು. ನಮ್ಮಲ್ಲಿ ಸಂಘಟನಾ ಸಾಮರ್ಥ್ಯವಿಲ್ಲ. ಅದಕ್ಕೆ ಕಾರಣವಿಷ್ಟೆ: ಅಧಿಕಾರವನ್ನು ಇತರರೊಂದಿಗೆ ಹಂಚಿಕೊಳ್ಳು ವುದು ನಮಗೆ ಇಷ್ಟವಾಗುವುದಿಲ್ಲ ಮತ್ತು ನಮ್ಮ ನಂತರ ಸಂಸ್ಥೆ ಏನಾದೀತೆಂಬ ಕಾಳಜಿಯೂ ನಮಗಿಲ್ಲ!"

ಈಗ ಇನ್ನೊಂದು ಘಟನೆ. ಸ್ವಾಮಿ ಬ್ರಹ್ಮಾನಂದರು ಕಾಶಿಯಲ್ಲಿದ್ದಾಗ ಅಲ್ಲಿನ ಆಶ್ರಮದ ಹಿರಿಯ ಸಂನ್ಯಾಸಿ ಗಳೊಬ್ಬರು ಮಾಡಿದ ತಪ್ಪಿಗಾಗಿ ಅವರನ್ನು ಚೆನ್ನಾಗಿ ಬೈದರು. ಇದನ್ನು ನೋಡಿದ ಸ್ವಾಮಿ ವಿಶುದ್ಧಾನಂದರೆಂದರು: "ಮಹಾ ರಾಜ್, ನಮ್ಮ ತಪ್ಪುಗಳನ್ನು ಕಂಡು ನೀವು ಅಷ್ಟೊಂದು ಕೋಪಿಸಿಕೊಂಡರೆ ನಾವೇನು ಮಾಡಬೇಕು! ನಾವು ದುರ್ಬಲರು. ನಮ್ಮಿಂದ ಆಗಾಗ ತಪ್ಪಾಗುತ್ತಿರುತ್ತದೆ ಎಂದು ನಿಮಗೆ ಗೊತ್ತೇ ಇದೆ." ಆಗ ಸ್ವಾಮಿ ಬ್ರಹ್ಮಾನಂದರು ತಮ್ಮ ತುಟಿ ಹಾಗೂ ಎದೆ ಮುಟ್ಟಿ ತೋರಿಸುತ್ತ ಹೇಳಿದರು: "ನೋಡು, ನನ್ನ ಕೋಪ ವೆಲ್ಲ ಇಲ್ಲಿಂದಲೇ (ತುಟಿಯಿಂದ) ಹೊರತು ಇಲ್ಲಿಂದ (ಹೃದಯದಿಂದ) ಅಲ್ಲ... ನಾನು ಕಂಬಳಿಯಿಂದ ಉಣ್ಣೆಯನ್ನು ಕೀಳಲಾರಂಭಿಸಿದರೆ ಇನ್ನಲ್ಲಿ ಕಂಬಳಿಯೆಲ್ಲಿ ಉಳಿಯುತ್ತದೆ?"

ಆಲೋಚಿಸಿ ನೋಡಿದರೆ ಈ ಮಾತು ಅದೆಷ್ಟು ಅರ್ಥ ಪೂರ್ಣ! ಸಜ್ಜನರ ಹೃದಯ ಅತ್ಯಂತ ಮೃದು. ಅವರ ಭಾವನೆ ಗಳು ಅತ್ಯಂತ ಸುಸಂಸ್ಕೃತ; ಅವರ ನಡೆವಳಿಕೆ ಅತ್ಯಂತ ಅಚ್ಚು ಕಟ್ಟು. ಅವರ ಮಾತು ಸುಮಧುರ ಸಂಗೀತ. ಇಂತಹ ಸಂತರ ಜೊತೆಯಲ್ಲಿ ವಾಸಮಾಡುವುದು ಸುಲಭವಲ್ಲದೆ ಮತ್ತೇನು? ಆದರೆ ಸಾಮಾನ್ಯ ಜನರ ವಿಷಯದಲ್ಲಿ ಮಾತ್ರ ಹಾಗಾಗು ವುದಿಲ್ಲ. ಅವರಲ್ಲಿ ಹಲವಾರು ಬಗೆಯ ಲೋಪದೋಷಗಳೆಲ್ಲ ಇರುವುದು ಅನಿವಾರ್ಯ. ಅವರ ಭಾವನೆಗಳು, ಮಾತುಗಳು, ಕೃತಿಗಳು ಇನ್ನೂ ಸಾಕಷ್ಟು ಸುಸಂಸ್ಕೃತವಾಗಿರುವುದಿಲ್ಲ. ಸಜ್ಜನರು ಈ ಬಗೆಯ ವ್ಯಕ್ತಿಗಳೊಂದಿಗೆ ಇರಬೇಕಾಗಿ ಬಂದಾಗ ಅವರ ಲೋಪದೋಷಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಹೀಗೆ ತಾಳ್ಮೆಯಿಂದಿದ್ದರೆ ಮಾತ್ರ ಸರಿಯಾದ ಸಮಯ ನೋಡಿ ಅವರನ್ನು ತಿದ್ದಿ ಅವರಿಗೆ ಮಾರ್ಗದರ್ಶನ ನೀಡಿ ಅವರ ವ್ಯಕ್ತಿತ್ವವನ್ನು ಸುಧಾರಿಸಲು ಸಾಧ್ಯವಾಗುತ್ತದೆ. ಅದರ ಬದಲಿಗೆ ಅವರಲ್ಲಿರುವ ದೋಷಗಳಿಗಾಗಿ ಒಬ್ಬೊಬ್ಬರನ್ನೇ ದೂರ ಮಾಡುತ್ತ ಬಂದರೆ ಕೊನೆಗೆ ಅಲ್ಲಿ ಯಾರೂ ಉಳಿಯುವುದೇ ಇಲ್ಲ! ಉದಾಹರಣೆಗೆ, ಕಂಬಳಿ ತಯಾರಾಗಬೇಕಾದರೆ ಅಸಂಖ್ಯಾತ ಉಣ್ಣೆಯ ಎಳೆಗಳು ಸೇರಿರಬೇಕಲ್ಲವೆ? ಇಂತಹ ಕಂಬಳಿಯೊಂದರ ಉಣ್ಣೆಯ ಎಳೆಗಳಲ್ಲಿ ಕೆಲವನ್ನು ಒರಟು ಎಂಬ ಕಾರಣದಿಂದ, ಇನ್ನು ಕೆಲವನ್ನು ಬಣ್ಣ ಚೆನ್ನಾಗಿಲ್ಲವೆಂಬ

ಕಾರಣದಿಂದ, ಹಾಗೆಯೇ ಇತರ ಎಳೆಗಳನ್ನು ಬೇರೆ ಬೇರೆ ಕಾರಣಗಳಿಂದ ಕಿತ್ತುಹಾಕುತ್ತ ಬಂದರೆ ಇನ್ನು ಅಲ್ಲಿ ಕಂಬಳಿ ಎಂಬ ವಸ್ತು ಎಲ್ಲಿ ಉಳಿಯುತ್ತದೆ?

ಅಂತೆಯೇ ಒಂದು ಸಂಘ-ಸಂಸ್ಥೆ ಎಂಬುದು ನಿರ್ಮಾಣವಾಗಬೇಕಾದರೆ ಸದಸ್ಯರೆಂಬವರು ಇರಬೇಕಾಗುತ್ತದೆ. ಹಲವಾರು ಸದಸ್ಯರು ಸೇರಿದರೆ ಒಂದು ಮಹಾಸಂಘವಾಗುತ್ತದೆ. ಹಾಗೆಯೇ ಇಲ್ಲಿ ಹಲವಾರು ಸಾಧು-ಬ್ರಹ್ಮಚಾರಿಗಳೆಲ್ಲ ಸೇರಿ ರಾಮಕೃಷ್ಣ ಮಹಾಸಂಘ ನಿರ್ಮಾಣವಾಗಿದೆ. ಆದರೆ ಈ ಸಾಧು-ಬ್ರಹ್ಮಚಾರಿಗಳೆಲ್ಲರೂ ನೂರಕ್ಕೆ ನೂರು ಅಪ್ಪಟ ವ್ಯಕ್ತಿಗಳಾಗಿ ತಯಾರಾಗಿರುವರೆ? ಎಷ್ಟಾದರೂ ಪ್ರತಿಯೊಬ್ಬರಲ್ಲೂ ಒಂದಲ್ಲ ಒಂದು ಬಗೆಯ ದೋಷ-ದೌರ್ಬಲ್ಯ ಇದ್ದೇ ಇರುತ್ತದೆ. ಈಗ ಆಲೋಚಿಸಿ ನೋಡೋಣ—ಕಂಬಳಿಯಿಂದ ಉಣ್ಣೆಯನ್ನು ಕಿತ್ತು ತೆಗೆದಂತೆ ಸಾಧು-ಬ್ರಹ್ಮಚಾರಿಗಳಲ್ಲಿ ಒಬ್ಬೊಬ್ಬರನ್ನು ಒಂದೊಂದು ಕಾರಣಕ್ಕಾಗಿ ತೆಗೆದುಹಾಕುತ್ತ ಬಂದರೆ ಸಂಘವೆಲ್ಲಿ ಉಳಿದೀತು? ಆದರೆ ಹಾಗೆಂದ ಮಾತ್ರಕ್ಕೆ ಸಂಘದ ಸದಸ್ಯರು ತಪ್ಪಾಗಿ ನಡೆದುಕೊಂಡಾಗ ಸಮಯೋಚಿತವಾಗಿ ನಾಲ್ಕು ಗದರಿಕೆ ಹಾಕದಿರಲು ಸಾಧ್ಯವೆ? ಆದರೆ ಅದು ಅವರನ್ನು ತಿದ್ದುವುದಕ್ಕಾಗಿಯೇ ಹೊರತು ನಿಜವಾದ ಕೋಪವಲ್ಲ. ಆದ್ದರಿಂದಲೇ ಬ್ರಹ್ಮಾನಂದರು ತಮ್ಮ ಕೋಪವೆಲ್ಲ ಕೇವಲ ತುಟಿಯಲ್ಲಿಯೇ ಹೊರತು ಹೃದಯದಲ್ಲಲ್ಲ ಎಂದು ಹೇಳಿದ್ದು.

> ಪ್ರೀತಿಯೇ ಬಹು ಮುಖ್ಯವಾದುದು. ನಮ್ಮ ಸಂಘ ಬೆಳೆಯುತ್ತಿರುವುದೇ ಪ್ರೀತಿಯಿಂದ.
>
> *—ಶ್ರೀಮಾತೆ ಶಾರದಾದೇವಿ.*

ಅವಶ್ಯಕತೆ ಕಂಡುಬಂದಾಗ ಬಾಯಿಂದ ನಾಲ್ಕು ಮಾತುಗಳು ಹೊರಬಿದ್ದರೂ ಹೃದಯದಲ್ಲಿ ಪ್ರೀತಿಯ ಚಿಲುಮೆಯುಳ್ಳವರು ಮಾತ್ರವೇ ಸಂಘ-ಸಂಸ್ಥೆಗಳನ್ನು ಸಮರ್ಥವಾಗಿ ನಡೆಸಬಲ್ಲರು. ನಿಜಕ್ಕೂ, ಈ ಜಗತ್ತಿನಲ್ಲಿ ಪ್ರೀತಿಗಿರುವ ಶಕ್ತಿ ಇನ್ನಾವುದಕ್ಕೂ ಇಲ್ಲ, ಇರುವುದಕ್ಕೆ ಸಾಧ್ಯವೂ ಇಲ್ಲ. ಇಂದು ಬೃಹತ್ತಾಗಿ ಬೆಳೆದುನಿಂತಿರುವ ರಾಮಕೃಷ್ಣ ಮಹಾಸಂಘವನ್ನು ಶ್ರೀಮಾತೆ ಶಾರದಾದೇವಿಯವರು ತಮ್ಮ ದಿವ್ಯ ವಾತ್ಸಲ್ಯ ಸುಧೆಯುಣಿಸಿ ಸುದೃಢಗೊಳಿಸಿದ ಕಥೆ ತುಂಬ ಮಾರ್ಮಿಕ. ಪರಸ್ಪರ ಪ್ರೀತಿಯೇ ಸಂಘದ ಪ್ರಾಣ ಎಂಬ ಮೂಲಮಂತ್ರವನ್ನು ಕಲಿಸಿದವರು ಅವರು. ಮಠದ ಸಾಧು-ಬ್ರಹ್ಮಚಾರಿಗಳೆಲ್ಲರೂ ಭೇದಬುದ್ಧಿಯನ್ನು ಮೀರಿನಿಂತು ಸೌಹಾರ್ದದಿಂದಿರಬೇಕು, ಘನವಾದ ಭ್ರಾತೃತ್ವ ಬೆಳೆಸಿಕೊಳ್ಳಬೇಕು, ಭೇದಭಾವಗಳ ತಿಕ್ಕಾಟವೇ ಭ್ರಾತೃತ್ವವನ್ನು ಸುಟ್ಟು ಹಾಕುವಂಥದು ಎಂಬ ಮಾತನ್ನು ವಾತ್ಸಲ್ಯಪೂರ್ವಕವಾಗಿ ಹೇಳುತ್ತ ಬಂದವರು ಅವರು. ಅದರಲ್ಲೂ ಮಠದಲ್ಲಿ ಹಿರಿಯ ಸ್ಥಾನದಲ್ಲಿರುವವರು ಅಧಿಕಾರ ಚಲಾಯಿಸುವ ಮನೋಭಾವದವರಾಗಿಬಿಟ್ಟರೆ ಮಿಕ್ಕ ಆಶ್ರಮವಾಸಿಗಳಿಗೆ ಯಮಯಾತನೆಯಾಗುವುದರಿಂದ ಒಬ್ಬೊಬ್ಬರೇ ಅಲ್ಲಿಂದ ಕಾಲ್ಕಿತ್ತರೂ ಅಚ್ಚರಿಯೇನಿಲ್ಲ ಎಂಬುದನ್ನು ಅವರು ತಿಳಿಸಿಕೊಟ್ಟ ಘಟನೆಯೊಂದು ಸಂಘಟನೆಯ ತಂತ್ರವನ್ನು ಬೋಧಿಸುವ ಒಂದು ಸುಂದರ ಪಾಠವೇ ಆಗಿದೆ!

ಒಮ್ಮೆ ಕೊಯಲ್‌ಪಾರಾ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಕೇಶವಾನಂದರು (ಅವರ ಹಿಂದಿನ ಹೆಸರು ಕೇದಾರ ಬಾಬು) ಕರ್ಮಯೋಗದ ಹೆಸರಿನಲ್ಲಿ ಆಶ್ರಮದ ಬ್ರಹ್ಮಚಾರಿಗಳಿಂದ ಚೆನ್ನಾಗಿ ಕೆಲಸ ಮಾಡಿಸುತ್ತಿದ್ದರು. ಆದರೆ, ಪ್ರತಿಯಾಗಿ ಅವರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿರಲಿಲ್ಲ. ಪ್ರೀತಿವಿಶ್ವಾಸದ ಮಾತೇ ಇಲ್ಲ! ಅಷ್ಟೇ ಅಲ್ಲ, ಅವರಿಗೆ ಅತ್ಯಗತ್ಯವಾದ ಊಟ ಬಟ್ಟೆ ಒದಗಿಸಲೂ ಕೈಬಿಚ್ಚುತ್ತಿರಲಿಲ್ಲ. ಆದರೆ, ನಾವಿದನ್ನು ನೋಡಿ ಕೇಶವಾನಂದರನ್ನು ಜಿಪುಣರೆಂದರೆ ತಪ್ಪಾಗುತ್ತದೆ. ಏಕೆಂದರೆ, ಆ ಬ್ರಹ್ಮಚಾರಿಗಳಿಗೆಲ್ಲ ಕಟ್ಟುನಿಟ್ಟಿನ ತಪೋಮಯ ಜೀವನದ ಅಭ್ಯಾಸ ಮಾಡಿಸಬೇಕೆಂಬ ಉದ್ದೇಶ ಅವರದು. ಉದ್ದೇಶವೇನೋ ಒಳ್ಳೆಯದೇ, ವಿಧಾನ ಮಾತ್ರ ಹಿಂಸಾತ್ಮಕ! ಪರಿಣಾಮವಾಗಿ ಹಲವಾರು ಬ್ರಹ್ಮಚಾರಿಗಳು ಅವರೊಂದಿಗೆ ಇರಲಾರದೆ ಶ್ರೀಶಾರದಾದೇವಿಯವರ ಬಳಿಗೋ ಸ್ವಾಮಿ ಶಾರದಾನಂದರ ಬಳಿಗೋ ಹೋಗಿಬಿಟ್ಟರು. ಆದರೂ ಕೇಶವಾನಂದರಿಗೆ ತಮ್ಮ ತಪ್ಪು ತಿಳಿಯಲಿಲ್ಲ, ಧೋರಣೆಯನ್ನು ಬದಲಿಸಲಿಲ್ಲ. ಬದಲಾಗಿ ಶ್ರೀಶಾರದಾದೇವಿಯವರ ಬಳಿಗೆ ಬಂದು ದೂರಿಟ್ಟರು: "ಅಮ್ಮ, ಹಿಂದೆ ಈ ಬ್ರಹ್ಮಚಾರಿಗಳೆಲ್ಲ ವಿಧೇಯರಾಗಿಯೇ ಇದ್ದರು. ಆದರೆ ಈಚೆಗೆ ಅವರ ಬುದ್ಧಿ ಬಲಿತುಬಿಟ್ಟಿದೆ. ಅದಕ್ಕೇ ಅವರೀಗ ನನ್ನ ಮಾತು ಕೇಳುವುದಿಲ್ಲ. ಅಲ್ಲದೆ, ಶರತ್ ಮಹಾರಾಜರ (ಸ್ವಾಮಿ ಶಾರದಾನಂದರ) ಬಳಿಗೋ ನಿಮ್ಮ ಬಳಿಗೋ ಬಂದರೆ ಪ್ರೀತಿ-ವಿಶ್ವಾಸ ತೋರಿಸಿ ಇಟ್ಟುಕೊಳ್ಳುತ್ತೀರಿ. ಅಲ್ಲದೆ, ಒಳ್ಳೇ ಊಟ ಬೇರೆ ಸಿಗುತ್ತೆ. ಆದ್ದರಿಂದ ಇಲ್ಲೇ ಝಾಂಡಾ ಹೂಡಿಬಿಡುತ್ತಾರೆ. ಅಮ್ಮಾ, ನಾನು ನಿಮ್ಮನ್ನು ಕೇಳಿಕೊಳ್ಳುವುದು ಇಷ್ಟೇ—ನೀವು ಅವರನ್ನೆಲ್ಲ ಇಲ್ಲಿ ಇರಗೊಡದೆ ಸರಿಯಾಗಿ ಬುದ್ಧಿ ಹೇಳಿ ವಾಪಸ್ ಕಳಿಸಿದ್ದರೆ ಚೆನ್ನಾಗಿತ್ತು! ಆಗ ಅವರು ನನ್ನ ಜೊತೆಗೇ ವಿಧೇಯರಾಗಿ ಇರುತ್ತಿದ್ದರು!"

ಕೇಶವಾನಂದರ ಮಾತು ಕೇಳಿ ಶ್ರೀಶಾರದಾದೇವಿಯವರಿಗೆ ಬಹಳವೇ ಅಚ್ಚರಿಯೆನಿಸಿತು. ವಾತ್ಸಲ್ಯವೇ ಮೈವೆತ್ತಂತಿದ್ದ ಅವರು ಅರೆ ಮುನಿಸಿನಿಂದ ಉದ್ಗರಿಸಿದರು : "ಇದೇನಪ್ಪಾ, ನೀನು ಹೇಳುತ್ತಿರುವುದು? ಏನಾಗಿಬಿಟ್ಟಿದೆ ನಿನಗೆ? ಪ್ರೀತಿಯೇ ನಮ್ಮ ಬಲವಲ್ಲವೇನಪ್ಪಾ? ಈ ಪ್ರೀತಿ ವಿಶ್ವಾಸದ ಮೂಲಕವೇ ಶ್ರೀರಾಮಕೃಷ್ಣರ ಈ ಕುಟುಂಬ ರೂಪು ತಳೆದಿದೆ. ಮತ್ತೆ ನಾನಾದರೋ ತಾಯಿ! ನನ್ನ ಮಕ್ಕಳ ಊಟ ಬಟ್ಟೆಯ

ವಿಷಯದಲ್ಲಿ ಆಕ್ಷೇಪಣೆ ಮಾಡುತ್ತೀಯಲ್ಲ? ಅದೂ ನನ್ನ ಹತ್ತಿರವೇ! ಇದೇನಾಶ್ಚರ್ಯ!"

ಶ್ರೀಶಾರದಾದೇವಿಯವರು ಇಷ್ಟು ಕಡಕ್ಕಾಗಿ ಹೇಳಿದರೂ ಕೇಶವಾನಂದರಿಗೆ ವಿಷಯ ಒಳಹೊಕ್ಕಂತೆ ಕಾಣಲಿಲ್ಲ! ಒಮ್ಮೆ ಆಶ್ರಮವಾಸಿಗಳಲ್ಲಿ ಹೆಚ್ಚಿನವರು ಮಲೇರಿಯಾಗೆ ಗುರಿಯಾಗಿ ಮಲಗಿದಾಗಲೂ ಕೇಶವಾನಂದರು ಅವರ ಚಿಕಿತ್ಸೆಯ ಕಡೆಗೆ ಸಾಕಷ್ಟು ಗಮನ ಹರಿಸಲಿಲ್ಲ. ಇದು ತಿಳಿದುಬಂದಾಗ ಶ್ರೀಶಾರದಾದೇವಿಯವರೇ ಸ್ವತಃ ಅವರಿಗೆಲ್ಲ ಪುಷ್ಟಿಕರ ಆಹಾರ ಪಾನೀಯಗಳ ವ್ಯವಸ್ಥೆಮಾಡಿದರು. ಕೇಶವಾನಂದರ ವಿಚಿತ್ರ ಧೋರಣೆಯನ್ನು ಕಂಡು ಶ್ರೀಶಾರದಾದೇವಿಯವರು ಅವರಿಗೆ ಸ್ವಲ್ಪ ಖಾರವಾಗಿಯೇ ಹೇಳಿದರು: "ಏನಪ್ಪಾ ಇದು! ಏನೋ ಲೆಕ್ಕಾಚಾರದ ಬುದ್ಧಿಯಿಂದ ಈ ರೀತಿ ಅಧಿಕಾರ ನಡೆಸಿದರೆ ಆಶ್ರಮ ಸಾಗುವ ಬಗೆ ಹೇಗೆ? ಈ ಬ್ರಹ್ಮಚಾರಿಗಳೆಲ್ಲ ನಿನ್ನ ಶಿಷ್ಯರೇ ಇರಬಹುದು. ಆದರೆ, ಅತಿಯಾಗಿ ಬೈದರೆ ಸ್ವಂತ ಮಕ್ಕಳೇ ಹೊರಟುಹೋಗಿಬಿಡುತ್ತಾರೆ, ನೆನಪಿರಲಿ!"

ಸ್ವಾರಸ್ಯವೇನೆಂದರೆ, ಕೇಶವಾನಂದರ ಕರ್ತವ್ಯನಿಷ್ಠೆ, ಕಾರ್ಯ ದಕ್ಷತೆಗಳನ್ನು ಶ್ರೀಶಾರದಾದೇವಿಯವರು ಬಹುವಾಗಿ ಮೆಚ್ಚಿದ್ದರು. ಕೇಶವಾನಂದರ ಮೇಲೆ ಅಪಾರ ಪ್ರೀತಿವಿಶ್ವಾಸವೂ ಇತ್ತು. ಹೀಗಿದ್ದರೂ ಅವರ ಬಿಗಿ ಹಾಗೂ ದರ್ಪದ ಮನೋಭಾವವನ್ನು ಎಂದಿಗೂ ಪುರಸ್ಕರಿಸಿದವರಲ್ಲ. ಒಮ್ಮೆ, ಕೊಯಲಪಾರಾದ ಕೆಲವು ಬ್ರಹ್ಮಚಾರಿಗಳು ಆ ಆಶ್ರಮವನ್ನು ಬಿಟ್ಟು ಬೇರೆ ಕಡೆಗೆ ಹೊರಟು ಹೋದರು. ಆಗ 'ಶಿಸ್ತಿನ ಸಿಪಾಯಿ'ಯಾದ ಕೇಶವಾನಂದರು ಶ್ರೀಶಾರದಾದೇವಿಯವರ ಬಳಿಗೆ ಬಂದು ಒಂದು ಸೂಚನೆ ಕೊಟ್ಟರು: "ಅಮ್ಮ, ಅವರೆಲ್ಲ ಈ ಆಶ್ರಮವನ್ನು ಬಿಟ್ಟು ಬೇರೆ ಕಡೆಗೆ ಹೊರಟುಬಿಟ್ಟಿದ್ದಾರೆ. ನೀವು ದಯವಿಟ್ಟು ಇತರ ಆಶ್ರಮಗಳ ಅಧ್ಯಕ್ಷರಿಗೂ ಹೇಳಿ ಅವರಿಗೆ ಬೇರೆಲ್ಲೂ ಆಶ್ರಯ ಸಿಗದಂತೆ ಮಾಡಿದರೆ, ಅವರು ಇಲ್ಲಿಗೇ ಹಿಂದಿರುಗಿ ಬರುತ್ತಾರೆ."

ಅವರ ಈ ಸಲಹೆ ಕೇಳಿದ ಶ್ರೀಶಾರದಾದೇವಿಯವರು ರೇಗಿಬಿಟ್ಟರು: "ಏನೆಂದೆ! ಅವರಿಗೆ ನಾನು ಏನು ಹೇಳಬೇಕಂದೆ? ಅವರಿಗೆ ಬೇರೆಲ್ಲೂ ಸ್ಥಳಾವಕಾಶ ಸಿಗುವುದಿಲ್ಲ ಅನ್ನಬೇಕೆ! ನೋಡು, ಅವರೂ ನನ್ನ ಮಕ್ಕಳೇ. ಅವರೆಲ್ಲ ಶ್ರೀರಾಮಕೃಷ್ಣರ ಬಳಿಗೆ ಬಂದಿದ್ದಾರೆ. ಆದ್ದರಿಂದ ಅವರು ಎಲ್ಲೇ ಇದ್ದರೂ ಖಂಡಿತವಾಗಿ ಶ್ರೀರಾಮಕೃಷ್ಣರು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಅವರಿಗೆಲ್ಲೂ ಸ್ಥಳಾವಕಾಶ ಸಿಗುವುದಿಲ್ಲವೆಂದು ತಾಯಿಯಾದ ನನ್ನ ಬಾಯಲ್ಲಿ ಹೇಳಿಸಲು ನೋಡುತ್ತಿದ್ದೀಯಲ್ಲ! ನಾನೆಂದಿಗೂ ಹಾಗೆ ಹೇಳಲಾರೆ."

ಈ ಮಾತುಗಳನ್ನಾಡುವಾಗ ಉದ್ವೇಗದಿಂದ ಶ್ರೀಶಾರದಾದೇವಿಯವರ ಮುಖ ಕಂಪಡರಿತ್ತು! ಧ್ವನಿ ಏರಿತ್ತು! ಅವರ ಅಪೂರ್ವ ಆವೇಶವನ್ನು ಕಂಡು ಅಲ್ಲಿದ್ದವರೆಲ್ಲ ಬೆರಗುಬಡಿದು ಸ್ತಬ್ಧರಾದರು. ಕೇಶವಾನಂದರು ತಕ್ಷಣ ಅವರ ಪಾದಕ್ಕೆ ಬಿದ್ದು ಕ್ಷಮೆ ಕೇಳಿಕೊಂಡರು.

> **ಯಾರು ಸಹಿಸಬಲ್ಲರೊ ಅವರು ಉಳಿಯುವರು;**
> **ಯಾರು ಸಹಿಸಲಾರರೊ ಅವರು ಅಳಿಯುವರು.**
>
> *—ಶ್ರೀರಾಮಕೃಷ್ಣರು*

ಹೀಗೆ, ಶ್ರೀಶಾರದಾದೇವಿಯವರು ಮಠದ ಹಿರಿಯ ಸಾಧುಗಳಿಗೆ ಕ್ಷಮೆದೋರುವ ಕ್ರಮವನ್ನು ಕಲಿಸಿದರು; ಸಹನೆಯಿಂದಿರಬೇಕಾದ ಆವಶ್ಯಕತೆಯನ್ನು ಮನಗಾಣಿಸಿದರು. ಅಂತೆಯೇ ಅವರು ಇತರ ಆಶ್ರಮವಾಸಿಗಳಿಗೂ ಶಿಸ್ತು-ಸಂಯಮದಿಂದಿರುವಂತೆ, ಸಹನೆಯನ್ನು ಅಭ್ಯಸಿಸುವಂತೆ ಬುದ್ಧಿ ಹೇಳುತ್ತಿದ್ದರು. ಒಮ್ಮೆ ಒಬ್ಬ ಬ್ರಹ್ಮಚಾರಿಗೆಂದರು: "ನೋಡು, ನೀವು ಪ್ರತಿಯೊಬ್ಬರೂ ಹೊಂದಿಕೊಂಡಿರುವುದನ್ನು ರೂಢಿಸಿಕೊಳ್ಳಬೇಕು. ಶ್ರೀರಾಮಕೃಷ್ಣರು ಪದೇ ಪದೇ ಹೇಳುತ್ತಿದ್ದರು: 'ಸಹಿಸಿಕೊ. ಸಹಿಸಿಕೊ, ಸಹಿಸಿಕೊ. ಯಾರು ಸಹಿಸಬಲ್ಲರೊ ಅವರು ಉಳಿಯುವರು; ಯಾರು ಸಹಿಸಲಾರರೋ ಅವರು ಅಳಿಯುವರು' ಎಂದು. ಎಲ್ಲವನ್ನೂ ಸಹಿಸಿಕೊಳ್ಳಲು ಕಲಿ. ಯಾರು ಸರಿ ಯಾರು ತಪ್ಪು ಎಂಬುದನ್ನು ತೀರ್ಮಾನಿಸಲು ಭಗವಂತ ನಿದ್ದಾನೆ."

ನಿಜ, ಸಂಘವೆಂದಮೇಲೆ ಅಲ್ಲಿ ಕೆಲವೊಂದು ಇತಿಮಿತಿಗಳು, ಅಡಚಣೆಗಳು ಇದ್ದೇ ಇರುತ್ತವೆ. ಅವುಗಳನ್ನು ನಿಶ್ಶೇಷವಾಗಿ ನಿವಾರಿಸಲು ಸಾಧ್ಯವೇ ಇಲ್ಲ. ಶ್ರೀಶಾರದಾದೇವಿಯವರು ಇದನ್ನು ಚೆನ್ನಾಗಿಯೇ ಅರಿತಿದ್ದರು. ಆದರೂ ಅವರು ಅತ್ತ ಹಿರಿಯ ಸ್ವಾಮಿಗಳನ್ನೂ ಇತ್ತ ಕಿರಿಯ ಬ್ರಹ್ಮಚಾರಿಗಳನ್ನೂ ಒಗ್ಗಟ್ಟಿನಿಂದ ನಡೆಯುವಂತೆ, ಪರಸ್ಪರ ವಿಶ್ವಾಸದಿಂದಿರುವಂತೆ ತಿದ್ದಿ ಮುನ್ನಡೆಸುತ್ತಿದ್ದರು. ಉತ್ತಮ ತಾಯಿಯೊಬ್ಬಳ ಮಕ್ಕಳು ಉತ್ತಮರಾಗುವುದು ಆ ತಾಯಿ ಕೊಡುವ ಉತ್ತಮ ಶಿಕ್ಷಣದಿಂದಲ್ಲವೆ?

ಇಲ್ಲಿಯವರೆಗೆ ನಾವು ಸಂಘಟನೆಯ ಸಂಬಂಧವಾಗಿ ಸ್ವಾಮಿ ವಿವೇಕಾನಂದರ, ಸ್ವಾಮಿ ಬ್ರಹ್ಮಾನಂದರ ಹಾಗೂ ಶ್ರೀಶಾರದಾದೇವಿಯವರ ವಿಚಾರಧಾರೆಯನ್ನು ಅವಲೋಕಿಸಿದಂತಾಯಿತು. ಆದರೆ ರಾಮಕೃಷ್ಣ ಮಠ ಮತ್ತು ಮಿಷನ್ನು ನಡೆದುಬಂದ ಆ ಸುದೀರ್ಘ ಅವಧಿಯಲ್ಲಿ ಅವರು ಅದೆಷ್ಟು ವಿಧಗಳಿಂದ ಮಾರ್ಗದರ್ಶನ ನೀಡಿರಬಹುದೆಂಬುದನ್ನು ಅರಿಯುವ ಕಾರ್ಯ ನಮ್ಮ ಮುಂದಿದೆ. ಏಕೆಂದರೆ, ಸಂಸ್ಥೆಯನ್ನು ರೂಪಿಸುವುದು, ಬೆಳೆಸುವುದು ಹಾಗೂ ತನ್ಮೂಲಕ ಅರ್ಥಪೂರ್ಣ ಉದ್ದೇಶಗಳನ್ನು ಸಿದ್ಧಿಸಿಕೊಳ್ಳುವುದು ಸುಲಭದ ಮಾತಲ್ಲ. ಈ ಸತ್ಯಾಂಶವನ್ನರಿಯುವುದಕ್ಕಾದರೂ ಒಂದು ಪುಟ್ಟ ಸಂಸ್ಥೆಯನ್ನು ಕಟ್ಟಿ ನೋಡಬೇಕು. ಏಕೆಂದರೆ, ಎಷ್ಟೆಷ್ಟೋ ಅಂಶಗಳನ್ನು ಪ್ರತ್ಯಕ್ಷ ಅನುಭವವಾಗದೆ ಅರಿಯುವುದು ದುಸ್ಸಾಧ್ಯ! *